ಅಧ್ಯಯನದ ಬಗ್ಗೆ ಆಕ್ಷೇಪಗಳನ್ನು ಮಾಡಲಿಲ್ಲ. ಆದರೆ, ನಿಜವಾಗಿಯೂ ಸವಾಲುಗಳು ಎದುರಾದುದು ನಮ್ಮ ಅಧ್ಯಯನ ಮತ್ತು ಪ್ರಸ್ತುತಿಯ ನಡುವೆ.

ಅದಕ್ಕೂ ಮುನ್ನ ಮಣಿಪುರಿಯ ಬಗ್ಗೆ ನಿಮಗಿಷ್ಟು ಹೇಳಬೇಕು. ಮಣಿಪುರದಲ್ಲಿ 'ಲಾಯಿಹರೊಬ' ಎಂಬ ಮಹಾ ನೃತ್ಯೋತ್ಸವ ಬಹಳ ಪುರಾತನ ಕಾಲದಿಂದಲೂ ನಡೆಯುತ್ತಿದೆ. ಈಗಲೂ ನಡೆಯುತ್ತದೆ. ಭಾರತದ ಈಶಾನ್ಯ ಮೂಲೆಯಲ್ಲಿರುವ ಮಣಿಪುರ ಪ್ರದೇಶವು ಹಸಿರು ಬೆಟ್ಟಸಾಲುಗಳ ಮಡಿಲಿನಲ್ಲಿರುವ ಸುಂದರವಾದ ಪ್ರದೇಶ. ಶಿವ ಪಾರ್ವತಿಯರು ಇಲ್ಲಿ ನೃತ್ಯ ಮಾಡುತ್ತಿದ್ದರು ಎಂಬ ಪ್ರತೀತಿ ಇಲ್ಲಿನ ಜನರ ಮನಸ್ಸಿನಲ್ಲಿ ಬೇರೂರಿದೆ. ಆದ್ದರಿಂದ ನೃತ್ಯವೆಂಬುದು ಇಲ್ಲಿನ ಜನರಿಗೆ ಕಲಿಯಬೇಕಾದ ವಿಷಯವೇ ಅಲ್ಲ. ಮಗುವೊಂದು ಹೇಗೆ ಹೆಜ್ಜೆಯೂರಿ ನಡೆಯುವುದು ಸಹಜವೋ, ನೃತ್ಯವೂ ಅಷ್ಟೇ ಸಹಜವಾದುದು. ಕೃಷಿ ಚಟುವಟಿಕೆಗಳು ಕಡಿಮೆ ಇರುವ ಸಮಯದಲ್ಲಿ ಈ 'ಲಾಯಿಹರೊಬಾ' ನೃತ್ಯಸಮ್ಮೇಳನವು ನಡೆಯುತ್ತದೆ. 'ಲಾಯಿಹರೊಬಾ' ಎಂದರೆ ದೇವರ ಸಂತೋಷಕೂಟವೆಂದರ್ಥ. ಸಾಮಾನ್ಯವಾಗಿ ದೇವಾಲಯಗಳಲ್ಲಿ ಸೇರುವ ಜನರು ಇದರಲ್ಲಿ ಭಾಗವಹಿಸುವರು. ಅರ್ಚಕರು (ಮೈಬಾಸ್) ಮತ್ತು ಅವರ ಮನೆಯ ಸ್ತ್ರೀಯರು (ಮೈಬೀಸ್) ನೃತ್ಯದ ಮುನ್ನೆಲೆಯಲ್ಲಿ ಇದ್ದು, ಈ ಸೃಷ್ಟಿಯು ಹೇಗಾಯಿತು ಎಂಬ ಹಾಡುಗಳಿಗೆ ನರ್ತಿಸುತ್ತಾರೆ. ಸುಮಾರು 15ನೇ ಶತಮಾನದವರೆಗೂ ಇದೇ ಮಾದರಿಯಲ್ಲಿ ಸಂಪ್ರದಾಯ ನಡೆದು ಬಂತು. ನಂತರದ ದಿನಗಳಲ್ಲಿ ವೈಷ್ಣವ ಪಂಥವು ಹೆಚ್ಚು ಜನಪ್ರಿಯವಾಗುತ್ತಿದ್ದಂತೆಯೇ ಚೈತನ್ಯ ಮಹಾಪ್ರಭುಗಳ ಪ್ರಭಾವ ಮಣಿಪುರದಲ್ಲಿ ಗಾಢವಾಯಿತು. ಭಾಗ್ಯಚಂದ್ರ ಎಂಬ ರಾಜನ ಅವಧಿಯಲ್ಲಿ ಮಣಿಪುರದಲ್ಲಿ ವೈಷ್ಣವ ಪಂಥವು ಅಧಿಕೃತವಾಗಿ ಘೋಷಣೆಯಾಯಿತು. ಬಹುಶ ಇದೇ ಅವಧಿಯಲ್ಲಿ 'ಕೃಷ್ಣ ರಾಧೆಯರ ರಾಸಲೀಲೆ ಪರಿಕಲ್ಪನೆ'ಯು ರೂಪು ಪಡೆಯಿತು.

ರಾಸಲೀಲೆ ಮತ್ತು ಸಂಕೀರ್ತನೆಗಳ ಪೈಕಿ ಸಂಕೀರ್ತನೆಯೆನ್ನುವುದು ಹೆಚ್ಚು ಸಂಪ್ರದಾಯಬದ್ಧವಾಗಿ ನಡೆಯುವಂಥದ್ದು. ಕೃಷ್ಣನ ಮಹಿಮೆಯನ್ನು ಸಾರುವ ನೃತ್ಯವು ದೇವಸ್ಥಾನಗಳಲ್ಲಿ ನಡೆಯುವಾಗ ಭಕ್ತರು ಸಭೆಯಲ್ಲಿ ಎದ್ದು ನಿಂತು ತಾವೂ ಕೈ ಜೋಡಿಸಿ ಹೆಜ್ಜೆ ಹಾಕುತ್ತಾರೆ. ಕೃಷ್ಣ ಮತ್ತು ರಾಧೆಯ ಪಾತ್ರಧಾರಿಯರನ್ನು ದೇವರೆಂದೇ ಭಾವಿಸಿ ಸಾಷ್ಟಾಂಗ ಪ್ರಣಾಮಗಳನ್ನು ಮಾಡುತ್ತಾರೆ. ಭಕ್ತಿಯ ಪರಾಕಾಷ್ಠೆ ತಲುಪಿ, ತಮ್ಮನ್ನು ಕಾಪಾಡುವಂತೆ, ಸಂಸಾರ ತಾಪತ್ರಯ ಬಂಧನಗಳಿಂದ ಮುಕ್ತರನ್ನಾಗಿ ಮಾಡುವಂತೆ ಬೇಡುತ್ತಾ ಕಣ್ಣೀರುಗರೆದು ನಮಸ್ಕರಿಸುತ್ತಾರೆ. ತಮ್ಮ ಕೈಲಿದ್ದುದನ್ನೆಲ್ಲಾ ಅಲ್ಲಿ ಸಮರ್ಪಣೆ ಮಾಡುತ್ತಾರೆ. ಪಾತ್ರಧಾರಿಗಳಿಗೆ ಶಾಲು-ಹೂವುಗಳನ್ನು ಅರ್ಪಿಸಿ ಕೃತಾರ್ಥ ಭಾವ ತಾಳುತ್ತಾರೆ. ಅಂತಹ ದೇವಸ್ಥಾನಗಳಲ್ಲಿ ಸಂಕೀರ್ತನೆಗಳನ್ನು ನೋಡಿ ನಾನೂ ಕಣ್ಣೀರು ತುಂಬಿಕೊಂಡು ಕೃಷ್ಣನನ್ನು ಸ್ಮರಿಸಿರುವೆ. ಗಂಟೆಗಟ್ಟಲೆ, ದಿನಗಟ್ಟಲೆ ದೇವಸ್ಥಾನದ ಅಂಗಣಗಳಲ್ಲಿ ಕುಳಿತು ಈ ಅನುಭವ ಪಡೆದಿರುವೆ. ನೃತ್ಯ ಮಾಡುತ್ತಾ ಕೃಷ್ಣದೇವರಿಗೆ ಶರಣಾಗಿದ್ದೇನೆ. ಅವೆಲ್ಲ ಮೈ ನವಿರೇಳಿಸುವ ಕ್ಷಣಗಳು. ದೇವಸ್ಥಾನದ ಅಂಗಣದ ಮೂರೂ ಕಡೆಗಳಲ್ಲಿ ಭಕ್ತರು ಕುಳಿತುಕೊಳ್ಳುತ್ತಾರೆ. ಕೇಂದ್ರಭಾಗದಲ್ಲಿ ಕಲಾವಿದರು ಈ ನೃತ್ಯ ಸೇವೆ ಮಾಡುವುದು ವಾಡಿಕೆ. ಅಲ್ಲಿ ಸೇರಿರುವವರೆಲ್ಲರೂ ಭಕ್ತರೇ ಆಗಿರುವುದರಿಂದ ಭಕ್ತಿರಸ ಸ್ಫುರಿಸುವಂತೆ ಪ್ರದರ್ಶನ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲವಲ್ಲ. ಆದರೆ, ಈ ನೃತ್ಯಪ್ರಕಾರವನ್ನು ವೇದಿಕೆಯ ಮೇಲೆ ತರುವಾಗ, ರಸಾನುಭೂತಿಸೃಷ್ಟಿಯಾಗುವಂತೆ ನರ್ತಿಸುವ ಎಲ್ಲ ಜವಾಬ್ದಾರಿಗಳೂ ಕಲಾವಿದರ ಮೇಲೆಯೇ ಇರುತ್ತದಲ್ವ ?

**◆ ದೇವಸ್ಥಾನದ ಅಂಗಣದಲ್ಲಿ ನಡೆಯುವ ನೃತ್ಯ ಸಂಕೀರ್ತನೆಗೂ, ವೇದಿಕೆಯಲ್ಲಿ ಪ್ರಸ್ತುತಪಡಿಸುವ ನೃತ್ಯ ಕಾರ್ಯಕ್ರಮಕ್ಕೂ ವ್ಯತ್ಯಾಸಗಳೇನು?**

ದೇವಸ್ಥಾನದ ಅಂಗಣದಲ್ಲಿ ಸಂಪ್ರದಾಯದ ಪ್ರಕಾರ, ಚರಣ ಪಲ್ಲವಿಗಳನ್ನು ಮೂರು ಬಾರಿ ಪ್ರದರ್ಶಿಸುತ್ತ, ವಿಲಂಬ ಗತಿಯಲ್ಲಿ ಸಾಗುವುದಕ್ಕೆ ಯಾವುದೇ ಅಡೆತಡೆಯಿರುವುದಿಲ್ಲ. ಸಮಯದ ಹಂಗಿಲ್ಲದೆ ಅಲ್ಲಿ ವೃತ್ತಾಕಾರದಲ್ಲಿ ನೃತ್ಯ ಪ್ರಸ್ತುತಿಗೊಳ್ಳುತ್ತದೆ. ಗೊತ್ತಿರುವ ಕಥೆಯನ್ನೇ ಸಾವಿರಾರು ಬಾರಿ ಕೇಳಿದರೂ, ಅದನ್ನು ಮತ್ತೆ ಮತ್ತೆ ಕೇಳುವುದೇ, ಪ್ರದರ್ಶನವನ್ನು ನೋಡುವುದೇ ಭಾಗ್ಯವೆಂದು ಭಾವಿಸುವ ಭಕ್ತರು,